**ಕರ್ನಾಟಕ ಸರ್ಕಾರ**

ಕ್ರಮಾಂಕ ಜಿಎಡಿ 28 ಪಿಒಎಲ್ 76

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 15ನೇ ಮೇ 1976.

**ಅಧಿಕೃತ ಜ್ಞಾಪನ ಪತ್ರ**

ವಿಷಯ:- ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಕನ್ನಡದ ಬಳಕೆ- ರೆವಿನ್ಯೂ ಅಥವಾ ಇತರ ಉಪವಿಭಾಗಕ್ಕೆ ಮೀರಿ ವಿಸ್ತರಿಸುವ, ಆದರೆ ರೆವಿನ್ಯೂ ಜಿಲ್ಲೆಗೆ ಮೀರದ ಅಧಿಕಾರ ವ್ಯಾಪ್ತಿಯಿರುವ ಎಲ್ಲಾ ಸರ್ಕಾರಿ ಕಛೇರಿಗಳಿಗೆ ವಿಸ್ತರಣೆ-ಇಗ್ಲೀಷ್ ಭಾಷೆಯ ಬಳಕೆಯನ್ನು ನಿಲ್ಲಿಸಿಬಿಡುವುದು.

ಉಲ್ಲೇಖ:-1. ಅಧಿಸೂಚನೆ ಕ್ರಮಾಂಕ ಜಿಎಡಿ 55 ಪಿಒಎಲ್ 71 ದಿನಾಂಕ 26-6-72.

2. ಸುತ್ತೋಲೆ ಕ್ರಮಾಂಕ ಜಿ.ಎ.ಡಿ. 18 ಪಿಒಎಲ್ (ಕೆ.ಎಲ್.ಸಿ) 72, ದಿನಾಂಕ 5-7-72.
3. ಸುತ್ತೋಲೆ ಕ್ರಮಾಂಕ ಜಿಎಡಿ 60. ಪಿಒಎಲ್ (ಕೆ.ಎಲ್.ಸಿ) 72 ದಿನಾಂಕ 17-8-72.
4. ಸುತ್ತೋಲೆ ಕ್ರಮಾಂಕ ಜಿಎಡಿ. 4 ಪಿಒಎಲ್ 76 ದಿನಾಂಕ 5-1-76.
5. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬರೆದ ಅರೆ ಸರ್ಕಾರಿ ಪತ್ರ ಕ್ರಮಾಂಕ ಜಿಎಡಿ. 25 ಪಿಒಎಲ್ 75 ದಿನಾಂಕ 3-2-76.
6. ಸುತ್ತೋಲೆ ಕ್ರಮಾಂಕ ಜಿ.ಎ.ಡಿ. 28 ಪಿಒಎಲ್ 76 ದಿನಾಂಕ 15-5-76.

ಮೇಲೆ (1) ರಲ್ಲಿ ಹೇಳಿದ ದಿನಾಂಕ 26-6-72ರ ಅಧಿಸೂಚನೆಯಲ್ಲಿ ರೆವಿನ್ಯೂ ಅಥವಾ ಇತರ ಉಪ ವಿಭಾಗಕ್ಕೆ ಮೀರಿ ವಿಸ್ತರಿಸುವ, ಆದರೆ ರೆವಿನ್ಯೂ ಜಿಲ್ಲೆಗೆ

ಮೀರದ ಅಧಿಕಾರ ವ್ಯಾಪ್ತಿಯಿರುವ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಅಧಿಕೃತ ಪತ್ರ ವ್ಯವಹಾರಕ್ಕೆ ಸಂಬಂಧಿಸಿದಂತೆ ಕನ್ನಡವನ್ನು ಬಳಕೆಗೆ ತರಬೇಕೆಂದು ಆದೇಶ ನೀಡಲಾಗಿದೆ. ಈ ಆದೇಶಗಳನ್ನು ಹೊರಡಿಸಿ ನಾಲ್ಕು ವರ್ಷಗಳು ಕಳೆದರೂ, ಜಿಲ್ಲಾಮಟ್ಟಕ್ಕಿಂತಲೂ ಕೆಳಗಿನ ಹಲವಾರು ಅಧೀನ ಕಛೇರಿಗಳ ಅಧಿಕೃತ ಪತ್ರ ವ್ಯವಹಾರದಲ್ಲಿ ಇನ್ನೂ ಇಂಗ್ಲೀಷನ್ನೇ ಬಳಸಲಾಗುತ್ತಿದೆ.

ದಿನಾಂಕ 26-6-1972 ರ ಸರ್ಕಾರದ ಆದೇಶವನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಮೇಲೆ ಹೇಳಿರುವ ಉಲ್ಲೇಖಗಳ ಮೂಲಕ ಕಾಲ ಕಾಲಕ್ಕೆ ನಿರ್ದೇಶಗಳನ್ನು ಕೊಡಲಾಗಿದೆ. ಹೀಗಾದ್ದಗ್ಯೂ ಮತ್ತು ಇಂಗ್ಲೀಷ್ ಭಾಷೆಯ ಬಳಕೆ ಮುಂದುವರಿಯಲು ಯಾವುದೇ ರೀತಿಯ ಸಮರ್ಥನೆ ಇಲ್ಲದಿದ್ದಾಗ್ಯೂ ಕೆಳಗಿನ ಮಟ್ಟಗಳಲ್ಲಿ ಅಂದರೆ ತಾಲ್ಲೂಕು ಕಛೇರಿಗಳಲ್ಲಿ ಇಂಗೀಷಿನ ಬಳಕೆ ಇನ್ನೂ ಮುಂದುವರಿಯುತ್ತಿದೆ.

ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಎಲ್ಲಾ ಕಛೇರಿಗಳಿಗೆ ಸಾಕಷ್ಟು ಸಂಖ್ಯೆಯ ಕನ್ನಡ ಬೆರಳಚ್ಚು ಯಂತ್ರಗಳ ಸರಬರಾಜು, ನೌಕರರಿಗೆ ಕನ್ನಡ ಬೆರಳಚ್ಚಿನಲ್ಲಿ ತರಬೇತಿ ಸೌಲಭ್ಯ ಮತ್ತು ಪ್ರೋತ್ಸಾಹ, ಕನ್ನಡದಲ್ಲಿ ಟಿಪ್ಪಣಿ ಮತ್ತು ಕರಡು ಪತ್ರ ಸಿದ್ಧಪಡಿಸುವ ಬಗ್ಗೆ ತರಬೇತಿ ಸೌಲಭ್ಯ ಹಾಗೂ ಅದಕ್ಕೆ ಬೇಕಾಗುವ ಆಡಳಿತ ಸಾಹಿತ್ಯದ ಸರಬರಾಜು-ಇವೆಲ್ಲವನ್ನೂ ಒದಗಿಸಿರುವಾಗ ಅಧಿಕೃತ ಪತ್ರ ವ್ಯವಹಾರದಲ್ಲಿ ಕನ್ನಡವನ್ನು ಹೆಚ್ಚಾಗಿ ಬಳಕೆಗೆ ತರಲು ಯಾವ ತೊಂದರೆಯೂ ಇರಕೂಡದು.

ಈ ಎಲ್ಲಾ ಸೌಕರ್ಯಗಳನ್ನು ಒದಗಿಸಿರುವುದರಿಂದ, ಅಧಿಕೃತ ಪತ್ರ ವ್ಯವಹಾರದಲ್ಲಿ ಇಂಗ್ಲೀಷ್ ಬಾಷೆಯ ಬಳಕೆಯನ್ನು ಕ್ರಮೇಣ ಕಡಿಮೆ ಮಾಡುವುದು ಅತ್ಯಗತ್ಯ. ಆದುದರಿಂದ, ದಿನಾಂಕ 26-6-1972ರ ಅಧಿಸೂಚನೆಯಲ್ಲಿ ಇಂಗ್ಲೀಷ್ ಭಾಷಾ ಬಳಕೆಯ ಬಗ್ಗೆ ಮತ್ತು ಭಾಷಾ ಅಲ್ಪ ಸಂಖ್ಯಾತರ ಭಾಷಾ ಬಳಕೆಯ ಬಗ್ಗ ಹೇಳಿರುವ ಉಪಬಂಧಗಳಿಗೊಳಪಟ್ಟು:-

(1) ತಾಲ್ಲೂಕು ಮತ್ತು ಉಪವಿಭಾಗ ಮಟ್ಟಗಳಲ್ಲಿರುವ ಎಲ್ಲಾ ಇಲಾಖಾ ಕಛೇರಿಗಳಲ್ಲಿ ಇಂಗೀಷ್ ಭಾಷೆಯ ಬಳಕೆಯು ಅತ್ಯಲ್ಪವಾಗಿರತಕ್ಕದ್ದು ಮತ್ತು 1-1-1977ರಿಂದ ಎಲ್ಲಾ ಪತ್ರ ವ್ಯವಹಾರದಲ್ಲಿ ಕನ್ನಡವನ್ನೇ ಬಳಸತಕ್ಕದ್ದು.

(2) 1-1-1977ರಿಂದ ಎಲ್ಲಾ ಜಿಲ್ಲಾ ಮಟ್ಟದ ಕಛೇರಿಗಳಲ್ಲಿ ಟಿಪ್ಪಣಿ ಬರೆಯುವುದನ್ನು ಜಿಲ್ಲಾ ಮಟ್ಟದ ಮತ್ತು ಅಧೀನ ಕಛೇರಿಗಳ ನಡುವಿನ ಪತ್ರ ವ್ಯವಹಾರವನ್ನು ಮತ್ತು ಸಾರ್ವಜನಿಕರೊಂದಿಗೆ ಪತ್ರ ವ್ಯವಹಾರವನ್ನು ಸಾಧ್ಯವಾದಷ್ಟು ಮಟ್ಟಿಗೆ ಕನ್ನಡದಲ್ಲೇ ಮಾಡತಕ್ಕದ್ದು. ಎಲ್ಲಾ ಸರಳ ವಿಷಯಗಳಿಗೆ ಸಂಬಂಧಿಸಿದಂತೆ ಮೇಲಿನ

ಕಛೇರಿಗಳೊಂದಿಗೆ ಪತ್ರ ವ್ಯವಹಾರ ಸಹ ಕನ್ನಡದಲ್ಲಿರತಕ್ಕದ್ದು. ಆದರೆ, ತಾಂತ್ರಿಕ ಇಲಾಖೆಯ ಅಧಿಕಾರಿಗಳು, ಅಗತ್ಯವಿದ್ದರೆ, ಇಂಗ್ಲೀಷ್ ಬಳಸಬಹುದು ಎಂದು ಈ ಮೂಲಕ ನಿರ್ದೇಶನ ನೀಡಲಾಗಿದೆ.

ಈ ನಿರ್ದೇಶನಗಳು ನಿಷ್ಠೆಯಿಂದ ಕಾರ್ಯಗತವಾಗುವುದನ್ನು ವಿಭಾಗಾಧಿಕಾರಿಗಳು ಮತ್ತು ಇಲಾಖೆಗಳ ಮುಖ್ಯಸ್ಥರು ಹಾಗೂ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ನೋಡಿಕೊಳ್ಳಬೇಕೆಂದು ವಿನಂತಿ.

ಸಹಿ/-

**(ಎಮ್. ಶಂಕರನಾರಾಯಣನ್)**

ಸರ್ಕಾರದ ಅಡಿಷನಲ್ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.